ದಿನಾಂಕಃ 06.07.2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಹೆಚ್ ಬಿ ಎಸ್ ವಕೀಲರಿಂದಃ

ನಾನು ಈ ದಿನ ನ್ಯಾಯಾಲಯಕ್ಕೆ ಒಂದು ಮಧ್ಯಂತರ ಅರ್ಜಿ ಹಾಗೂ ದಾಖಲಾತಿಗಳ ಪಟ್ಟಿಯೊಂದಿಗೆ ಕೆಲವು ದಾಖಲಾತಿಗಳನ್ನು ಸಲ್ಲಿಸಿಕೊಂಡಿರುತ್ತೇನೆ ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರುತಿಸಬೇಕೆಂದು ಕೋರಿಕೊಳ್ಳುತ್ತೇನೆ.

ಸರ್ವಿಸ್ ಸರ್ಟಿಫಿಕೇಟನ ದೃಢೀಕೃತ ನಕಲು ದಾಖಲೆಯನ್ನು ನಿಪಿ4 ಎಂದು, ದಿಃ 26.06.2001 ರ ಆಫೀಸ್ ಆರ್ಡರ್ ದೃಢೀಕೃತ ನಕಲು ದಾಖಲೆಯನ್ನು ನಿಪಿ5 ಎಂದು, ಪ್ರೇಮಲೀಲಾ ರವರ ಮರಣ ಪ್ರಮಾಣ ಪತ್ರದ ದೃಢೀಕೃತ ನಕಲು ನಿಪಿ6 ಎಂದು, ಕುಟುಂಬ ಪಡಿತರ ಚೀಟಿಯ ದೃಢೀಕೃತ ನಕಲು ದಾಖಲೆಯನ್ನು ನಿಪಿ7 ಎಂದು(ಎರಡು ಪುಟಗಳಲಿ), ನನ್ನ ತಂದೆಯವರ ಆಧಾರ ಪತ್ರದ ದೃಢೀಕೃತ ನಕಲನ್ನು ನಿಪಿ8 ಎಂದು, ಸರ್ವೈವಲ್ ಸರ್ಟಿಫೀಕೆಟನ ದೃಢೀಕೃತ ನಕಲು ನಿಪಿ9 ಎಂದು ಗುರುತಿಸಲಾಯಿತು.

ಪ್ರತಿವಾದಿ ಪರವಾಗಿ ಪಾಟೀ ಸವಾಲುಃ

ವಕೀಲರನ್ನು ಕೂಗಿಸಲಾಯಿತು. ಅವರು ಗೈರು ಹಾಜರಿರುತ್ತಾರೆ. ಆದಾಗಿಯು, ನ್ಯಾಯಯುತ ದೃಷ್ಟಿಯಿಂದ ಈ ಸಾಕ್ಷಿದಾರರ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓ. ಹೇ. ಕೇ. ಸ. ಇ. ಎ. ಒ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಭದ್ರಾವತಿ

This is a True Copy of the Court Records Online. Authenticated @ districts.ecourtsindia.com/cnr/KASM310031302021/truecopy/order-3.pdf